# <u>ವಾರ್ಡ್ ನಂ: 83 ಕಾಡುಗುಡಿ ವಾರ್ಡ್ ಕಮಿಟಿ ಸಭೆಯ ನಡುವಳಿಗಳು:-</u>

ದಿನಾಂಕ: 05/12/2020 ರಂದು ಕಾಡುಗುಡಿ ವಾರ್ಡ್ ಸಂಖ್ಯೆ: 83 ರ ವ್ಯಾಪ್ತಿಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ: 21-09-2020 ಆದೇಶದಂತೆ ವಾರ್ಡ್ ಕಛೇರಿಯಲ್ಲಿ ಮಾನ್ಯ ವಾರ್ಡ್ ನೊಡಲ್ ಅಧಿಕಾರಿ, ರವರು ಸದಸ್ಯರು ಹಾಗೂ ಕಮಿಟಿಯ ಕಾರ್ಯದರ್ಶಿ ರವರ ಸಮಕ್ಷಮದಲ್ಲಿ ಸಭೆ ನಡೆಸಲಾಯಿತು,

ಈ ಸಭೆಯಲ್ಲಿ ಈ ಕೆಳಗೆ ತಿಳಿಸಿರುವ ಅಂಶಗಳನ್ನೊಳಗೊಂಡಂತೆ ವಾರ್ಡ್‌ನಲ್ಲಿ ಕಾರ್ಯನಿರ್ವಹಿಸಲು ಸಭೆಯಲ್ಲಿ ತಿರ್ಮಾನಿಸಲಾಯಿತು,

1. ಹಿಂದಿನ ಸಭೆಯಲ್ಲಿ(ದಿನಾಂಕ: 21-11-2020) ಚರ್ಚಿಸಲಾದ ವಿಷಯಗಳು ಮತ್ತು ದೂರುಗಳ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಚರ್ಚಿಸಲಾಯಿತು.

2. ಕೋವಿಡ್-19 ಸಾಂಕ್ರಾಮಿಕ ರೋಗ ತಡೆಗಟ್ಟುವ ಸಲುವಾಗಿ 4 ತಂಡಗಳಲ್ಲಿ ವಿಂಗಡಿಸಿ ಮತ್ತು ಪಾಸಿಟಿವ್ ಬಂದಿರುವ ಕಡೆ ಕೋವಿಡ್ ಪರೀಕ್ಷೆಯನ್ನು ವಾರ್ಡ್ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಮರ್ಪಕವಾಗಿ ಮಾಡುವುದು, ಹಾಗೂ ಕೋವಿಡ್ ಪಾಸಿಟಿವ್ ಬಂದಿರುವ ಸುತ್ತ-ಮುತ್ತ ಪ್ರದೇಶಗಳಲ್ಲಿ ಸ್ಯಾನಿಟೈಸರ್ ಮತ್ತು ಔಷದಿಯನ್ನು ಸಿಂಪಡಣೆ ಕಾರ್ಯವನ್ನು ಸಮರ್ಪಕವಾಗಿ ವಾರ್ಡ್ ವ್ಯಾಪ್ತಿಯಲ್ಲಿ ನಿರ್ವಹಿಸಲಾಗುತ್ತಿರುವುದು ಕಂಡು ಬಂದಿರುತ್ತದೆ, ಕೋವಿಡ್ ಸಂಬಂದಿಸಿದಂತೆ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ದೂರು ಬಂದಿರುವುದಿಲ್ಲ, ಇದೆ ರೀತಿಯಾಗಿ ಕೆಲಸವನ್ನು ಮುಂದುವರೆಸಲು ವಾರ್ಡ್ ನೊಡಲ್ ಅಧಿಕಾರಿ, ರವರು ಸದಸ್ಯರು ಹಾಗೂ ಕಮಿಟಿಯ ಕಾರ್ಯದರ್ಶಿಗಳು ತಿರ್ಮಾನಿಸಿದರು.

   ಕ್ರಮ: ಸಹಾಯಕ ಅಭಿಯಂತರು/ಕಂದಾಯ ಪರಿವೀಕ್ಷಕರು/ಕಿರಿಯ/
   ಕಿರಿಯ ಆರೋಗ್ಯ ಪರಿವೀಕ್ಷಕರು

3. ಕಾಡುಗುಡಿ ವಾರ್ಡ್ ನಂ; 83 ರಲ್ಲಿ ಹಸಿಕಸ / ಒಣಕಸ ವಿಂಗಡನೆಯ ಕುರಿತಾಗಿ ಬೀದಿ ನಾಟಕಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಹಾಗೂ ಔಷದಿ ಸಂಬಂದಿತ ಮ್ಯಾನ್ಯೂಯಲ್ ಸ್ಪ್ರೇಯಿಂಗ್, ಆಟೋ ಸ್ಪ್ರೇಯಿಂಗ್ ಫಾಗಿಂಗ್ ಕೆಲಸ ಕಾರ್ಯಗಳು ಸಮರ್ಪಕವಾಗಿ ನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆ. ಸದರಿ ಕೆಲಸವನ್ನು ಮುಂದುವರೆಸಿಕೊಂಡು ಹೊಗುವಂತೆ ವಾರ್ಡ್ ನೊಡಲ್ ಅಧಿಕಾರಿ, ರವರು ಸೂಚಿಸಿದರು.

   ಕ್ರಮ: ಕಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು

4. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳು ದುರಸ್ತಿಯಾಗಿರವ ಬಗ್ಗೆ ಸಾರ್ವಜನಿಕರಿಂದ ಅನೇಕ ದೂರುಗಳು ಬಂದಿದು, ಇದನ್ನು ಕೂಡಲೇ ಪರಿಶೀಲಿಸಿ, ದುರಸ್ತಿಗೊಳಿಸುವುದು ಹಾಗೂ ಬೀದಿ ದೀಪಗಳ ನಿರ್ವಹಣೆ ಮಾಡುವ ಸಮಯದಲ್ಲಿ ಬೇಕಾಗುವ ಸಾಮಾಗ್ರಿಗಳನ್ನು ಒದಗಿಸಲು ಗುತ್ತಿಗೆದಾರರಿಗೆ ಸೂಚಿಸಿದರು ಹಾಗೂ ಹೊಸದಾಗಿ ಎಲ್.ಇ.ಡಿ ಬೀದಿ ದೀಪಗಳನ್ನು ಅಳವಡಿಸಲು ಗುತ್ತಿಗೆದಾರರಿಗೆ / ಎಲೆಕ್ಟ್ರಿಕಲ್ ಇಂಜಿನಿಯರ್ ರವರಿಗೆ ವಾರ್ಡ್ ನೊಡಲ್ ಅಧಿಕಾರಿ, ರವರು ಸೂಚಿಸಿದರು.

   ಕ್ರಮ: ಸಹಾಯಕ ಅಭಿಯಂತರರು, ಮತ್ತು ವಿದ್ಯುತ್ ದೀಪಗಳ ಉಸ್ತುವಾರಿ ಇಂಜಿನಿಯರ್

5. ಕಂದಾಯ ವಸೂಲಿಗಾರರು ಹಾಗೂ ಕಂದಾಯ ಪರಿವೀಕ್ಷಕರುಗಳು ವಾರ್ಡ್ ಕಛೇರಿಯಲ್ಲಿ ಸಾರ್ವಜನಿಕರ ಅನುಕೂಲಕ್ಕೆ ಇರಲು ಸಾರ್ವಜನಿಕರು ಕೋರಿದರು. ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ಕ್ಯಾಪ್ ಮೂಲಕ ಖಾತೆ ಹಾಗೂ ಚುನಾವಣಾ ಐ.ಡಿ. ಕಾರ್ಡ್ (ವೋಟರ್ ಐ.ಡಿ) ಒದಗಿಸಲಾಗುವುದು ಸಾರ್ವಜನಿಕರು ಕೋರಿದರು. ಅದರಂತೆ ಸೂಕ್ತ ಕ್ರಮ ವಹಿಸಲು ನೊಡಲ್ ಅಧಿಕಾರಿ ರವರು ಸಹಾಯಕ ಕಂದಾಯ ಅದಿಕಾರಿಗಳು ವೈಟ್‌ಫೀಲ್ಡ್ ಉಪ ವಿಭಾಗ ರವರಿಗೆ ಸೂಚಿದರು.

   ಕ್ರಮ: ಸಹಾಯಕ ಕಂದಾಯ ಅಧಿಕಾರಿ, ವೈಟ್‌ಫೀಲ್ಡ್ ಉಪವಿಭಾಗ

6. ಕಾಡುಗುಡಿ ಪ್ಲಾಂಟೇಷನ್/ ದಿನ್ನೂರು, ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದವರು ಹಾಲಿ ಇರುವ ಜಾಗಕ್ಕೆ ಖಾತೆ ನೀಡಲು ಕೋರಿ ಪತ್ರವನ್ನು ಸಲ್ಲಿಸಿದು. ಅದರಂತೆ ಸೂಕ್ತ ಕ್ರಮ ವಹಿಸಲು ನೊಡಲ್ ಅಧಿಕಾರಿ ರವರು ಸಹಾಯಕ ಕಂದಾಯ ಅದಿಕಾರಿಗಳು ವೈಟ್‌ಫೀಲ್ಡ್ ಉಪ ವಿಬಾಗ ರವರಿಗೆ ಸೂಚಿದರು.

ಕ್ರಮ: ಸಹಾಯಕ ಕಂದಾಯ ಅಧಿಕಾರಿ, ವೈಟ್‌ಫೀಲ್ಡ್ ಉಪವಿಬಾಗ

7. ಹೊಸದಾಗಿ ಖಾತೆ ನೊಂದಾಯಿಸಲು / ಹೆಸರು ಬದಲಾವಣೆ ಉಳಿದಂತೆ ಸಕಾಲ-ದಲ್ಲಿ ನೊಂದಾಯಿಸಲು 30 ದಿನಗಳ ಒಳಗಾಗಿ ಅನುಮೋದಿಸಲಾಗುವುದು ಎಂದು ಸಹಾಯಕ ಕಂದಾಯ ಅದಿಕಾರಿಗಳು ವೈಟ್‌ಫೀಲ್ಡ್ ಉಪ ವಿಬಾಗ ರವರು ಸಾರ್ವಜನಿಕರಿಗೆ ತಿಳಿಸಿದರು.

ಕ್ರಮ: ಸಹಾಯಕ ಕಂದಾಯ ಅಧಿಕಾರಿ, ವೈಟ್‌ಫೀಲ್ಡ್ ಉಪವಿಬಾಗ

8. ವಾರ್ಡ್ ವ್ಯಾಪ್ತಿಯಲ್ಲಿ ಅಂಗನವಾಡಿ ಕೇಂದ್ರವನ್ನು ಹಾಗೂ ಜನಪದ ವೇದಿಕ್ಕೆ ನಿರ್ಮಿಸಲು ಸರ್ಕಾರಿ ಜಾಗವನ್ನು ಗುರುತಿಸಲು ಸೂಕ್ತ ಕ್ರಮ ವಹಿಸಲು ನೊಡಲ್ ಅಧಿಕಾರಿ ರವರು ಸಹಾಯಕ ಕಂದಾಯ ಅದಿಕಾರಿಗಳು ವೈಟ್‌ಫೀಲ್ಡ್ ಉಪ ವಿಬಾಗ ರವರಿಗೆ ಸೂಚಿದರು.

ಕ್ರಮ: ಸಹಾಯಕ ಕಂದಾಯ ಅಧಿಕಾರಿ, ವೈಟ್‌ಫೀಲ್ಡ್ ಉಪವಿಬಾಗ

9. ಕಾಡುಗುಡಿ ವ್ಯಾಪ್ತಿಯಲ್ಲಿ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ವತಿಯಿಂದ ಆಗೆದಿರುವ ರಸ್ತೆಯನ್ನು ಸರಿಯಾಗಿ ಮುಚ್ಚದೇ ಮಣ್ಣನ್ನು ರಸ್ತೆಯಲ್ಲಿ ಬಿಟ್ಟು ಸಾರ್ವಜನಿಕರಿಗೆ ತೊಂದರೇಯಾಗುತ್ತಿರುವುದಾಗಿ ಕೋರಿ ರಸ್ತೆಗಳನ್ನು ಸರಿಯಾದ ರೀತಿಯಲ್ಲಿ ಅಂದರೆ ಅನುಮೋದನೆಗೊಂಡ ಅಂದಾಜುಪಟ್ಟಿಯಂತೆ ರಿಸ್ಟೊರೇಷನ್ ಮಾಡಲು ಸಹಾಯಕ ಅಭಿಯಂತರರು, ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ರವರು ಕ್ರಮ ಕೈಗೊಳ್ಳಲು ಸೂಚಿಸಲಾಯಿತು. ಹಾಗೂ ಬೃಂದಾವನ ಬಡಾವಣೆ ಮತ್ತು ವಿಜಯಲಕ್ಷ್ಮಿ ಕಾಲೋನಿಯಲ್ಲಿ ಹೊಸದಾಗಿ ಕುಡಿಯುವ ನೀರಿನ ಸಂಪರ್ಕವನ್ನು ನೀಡಲು ಸಾರ್ವಜನಿಕರು ಕೋರಿರುವಂತೆ, ಸಹಾಯಕ ಇಂಜಿನಿಯರ್‌ಗೆ ಸೂಕ್ತ ಕ್ರಮ ವಹಿಸಲು ನೊಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ಸ.ಕಾ.ಅ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ

10. ಕಾಡುಗುಡಿ ವ್ಯಾಪ್ತಿಯಲ್ಲಿ ಮುನೇಶ್ವರ ಬಡಾವಣೆ, ಕಾಟೇರಮ್ಮ ಬಡಾವಣೆ ಹಾಗೂ ಸಿದಾರ್ಥ ಬಡಾವಣೆಗಳಲ್ಲಿ ಪಾಲಿಕೆ ವತಿಯಿಂದ ಕೊರೆದಿರುವ ಕೊಳವೆ ಬಾವಿಗಳನ್ನು ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಹಸ್ತಾಂತರಿಸಲು ಸಾರ್ವಜನಿಕರು ಕೋರಿದರು. ಅದಂತೆ, ವಾರ್ಡ್ ಇಂಜಿನಿಯರ್‌ಗೆ ಸೂಕ್ತ ಕ್ರಮ ವಹಿಸಲು ನೊಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ವಾರ್ಡ್ ಅಭಿಯಂತರರು

11. ಕುಡಿಯುವ ನೀರನ್ನು ಒದಗಿಸಲು ಕಾಡುಗುಡಿ ಪ್ಲಾಂಟೇಷನ್/ದಿನ್ನೂರು ಗ್ರಾಮದಲ್ಲಿ ಹೊಸದಾಗಿ ಕೊಳವೆ ಬಾವಿಗಳನ್ನು ಕೊರೆಸಿ, ನೀರನ್ನು ಸರಬರಾಜು ಮಾಡಲು ಸಾರ್ವಜನಿಕರು ಕೋರಿದರು. ಅದಂತೆ, ವಾರ್ಡ್ ಇಂಜಿನಿಯರ್‌ಗೆ ಸೂಕ್ತ ಕ್ರಮ ವಹಿಸಲು ನೊಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ವಾರ್ಡ್ ಅಭಿಯಂತರರು

12. ವಾರ್ಡ್ ವ್ಯಾಪ್ತಿಯಲ್ಲಿ ಸಿಲ್ಟ್ & ಟ್ರಾಕ್ಟರ್ ಕಾಮಗಾರಿ ನಿರ್ವಹಣೆ ಕೆಲಸವು ಮಂದಗತಿಯಲ್ಲಿ ನಡೆಯುತ್ತಿರುವುದರಿಂದ, ವಾರಕ್ಕೆ ಒಂದು ಗ್ರಾಮ/ಬಡಾವಣೆಗಳಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಾರ್ವಜನಿಕರು ಕೋರಿರುವುದರಿಂದ, ಸೂಕ್ತ ಕ್ರಮ ವಹಿಸಲು ವಾರ್ಡ್ ಅಭಿಯಂತರರಿಗೆ ನೊಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ವಾರ್ಡ್ ಅಭಿಯಂತರರು

13. ಎ.ಕೆ.ಜಿ.ಕಾಲೋನಿ ಹಾಗೂ ಚನ್ನಸಂದ್ರ ವ್ಯಾಪ್ತಿಯ ಅಡ್ಡ ರಸ್ತೆಗಳಲ್ಲಿ ಕಾವೇರಿ ನೀರಿನ ಕೊಳವೆಗಳು ಹಾಗೂ ಒಳಚರಂಡಿ ವ್ಯವಸ್ಥೆ ಇನ್ನು ಬಾಕಿ ಇರುವುದರಿಂದ, ಇದನ್ನು ಪೂರ್ಣಗೊಳಿಸಲು ಸೂಚಿಸಿದ್ದು, ಬಿ.ಡ್ಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಕೆಲಸ ಮುಗಿದ ನಂತರ ಪಾಲಿಕೆ ವತಿಯಿಂದ ರಸ್ತೆಗಳ ಡಾಂಬರೀಕರಣ/ಅಭಿವೃದ್ಧಿ ಮಾಡಲು ಕ್ರಮ ವಹಿಸಲಾಗುವುದು ಎಂದು ಸಹಾಯಕ ಇಂಜಿನಿಯರ್‌ಗೆ ಸೂಕ್ತ ಕ್ರಮ ವಹಿಸಲು ನೋಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ಸ.ಕಾ.ಅ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ

14. ರಾಮೇಗೌಡನಗರ, ಸಾಯಿಬಾಬಾ ಆಶ್ರಮದ ಪಕ್ಕದ ರಾಜಕಾಲುವೆ, ಚನ್ನಸಂದ್ರ ಮುಖ್ಯರಸ್ತೆಯ ರಾಜಕಾಲುವೆಗಳನ್ನು ಹೂಳು ತುಂಬಿದ್ದು, ಇದನ್ನು ತುರ್ತಾಗಿ ತೆಗೆಸಿ, ನೀರು ಸರಾಗವಾಗಿ ಹರಿಯುವಂತೆ ಸಾರ್ವಜನಿಕರು ಕೋರಿದರು ಹಾಗೂ ವಿಜಯಲಕ್ಷ್ಮಿ ಕಾಲೋನಿಯ ರಾಜಕಾಲುವೆ ಮೇಲೆ ಅನಧಿಕೃತವಾಗಿ ಕಟ್ಟಡಗಳನ್ನು ನಿರ್ಮಿಸಿದ್ದು, ಇದನ್ನು ತುರ್ತಾಗಿ ಸರ್ವೆ ಮಾಡಿಸಿ, ತೆರವುಗೊಳಿಸುವುದು ಹಾಗೂ ವೈಟ್ ರೋಸ್-ಇ.ಸಿ.ಸಿ ರಸ್ತೆ ಹತ್ತಾಶ್ರೀ ಅಪಾರ್ಟ್‌ಮೆಂಟ್‌ನ ಹತ್ತಿರ ಇರುವ ರಾಜಕಾಲುವೆ ಸಮಸ್ಯೆಯನ್ನು ತುರ್ತಾಗಿ ಚರ್ಚಿಸಿ, ವಾರ್ಡ್ ಅಭಿಯಂತರರ ಜೊತೆಯಲ್ಲಿ ಸ್ಥಳ ಪರಿಶೀಲಿಸಲು ಸಹಾಯಕ ಇಂಜಿನಿಯರ್‌ಗೆ ಸೂಕ್ತ ಕ್ರಮ ವಹಿಸಲು ನೋಡಲ್ ಅಧಿಕಾರಿ ರವರು ಸೂಚಿಸಿದರು.

ಕ್ರಮ: ಸ.ಕಾ.ಅ ಬೃ.ನೀ.ಗಾ

ವಾರ್ಡ್ ಕಮಿಟಿ ಸದಸ್ಯರು ಹಾಗೂ ಸಾರ್ವಜನಿಕರು, ಅಧಿಕಾರಿ ನೌಕರರು ಹಾಗೂ ಪಧಾಧಿಕಾರಿಗಳು ಈ ಮೇಲ್ಕಂಡಂತೆ ತಿಳಿಸಿರುವ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಹಾಗೂ ನಿರ್ಣಯಗಳಂತೆ ಕಾಡುಗುಡಿ ವಾರ್ಡ್ ನಂ: 83 ರ ವ್ಯಾಪ್ತಿಯಲ್ಲಿ ಕೆಲಸ ಕಾರ್ಯಗಳನ್ನು ಅಧ್ಯತೆ ಮೇರೆಗೆ ನಿರ್ವಹಿಸಲು ಸೂಚಿಸಲಾಯಿತು.

ಕಾಡುಗುಡಿ ವಾರ್ಡ ನಂ: 83 ರ ವಾರ್ಡ್ ಕಮಿಟಿಯ ಕಾರ್ಯದರ್ಶಿಯವರಾದ ಶ್ರೀ.ಸುರೇಂದ್ರ ಕುಮಾರ್, ಕಿರಿಯ ಅಭಿಯಂತರರು, ರವರು ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕಾರ್ಯನಿರ್ವಹಿಸಲು ಕೋರುತ್ತಾ, ವಂದನಾರ್ಪಣೆಯನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-

**ವಾರ್ಡ್ ಕಮಿಟಿ ಕಾರ್ಯದರ್ಶಿ**

**ವಾರ್ಡ್ ನಂ: 83 ಕಾಡುಗುಡಿ**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ